# ಗಾಂಧಿನಗರ ಪೋಸ್ಟ್



## ದೇಹಪ್ರೀತಿ, ರಗಡ್ ನೀತಿ

‘ರಗಡ್’ ವಿನೋದ್ ಪ್ರಭಾಕರ್ ನಟನೆಯ ಹೊಸ ಸಿನಿಮಾ. ಕಳೆದ ವಾರ ಬಿಡುಗಡೆಯಾದ ಚಿತ್ರದ ಟೀಸರ್‌ನಲ್ಲಿ ಎದ್ದುಕಾಣಿಸುವುದು ವಿನೋದ್‌ರ ದೇಹದಲ್ಲಿ ಎದ್ದುಕಾಣಿಸುವ ಮಡಿಕೆಗಳು. ನಾಯಕ ನಟರೆಲ್ಲ ಸಿಕ್ಸ್ ಪ್ಯಾಕ್‌ಗಾಗಿ ದೇಹವನ್ನು ಹುರಿಗಟ್ಟಿಸಿದರೆ, ಮರಿ ಟೈಗರ್ ‘ಏಯ್ಟ್ ಪ್ಯಾಕ್’ಗೆ ತಮ್ಮ ದೇಹವನ್ನು ಒಗ್ಗಿಸಿದ್ದಾರಂತೆ. ಸುಮಾರು ಆರು ತಿಂಗಳುಗಳ ಕಾಲ ದೇಹವನ್ನು ದಂಡಿಸಿರುವ ವಿನೋದ್, ‘ಏಯ್ಟ್ ಪ್ಯಾಕ್’ಗಾಗಿ ಕಠಿಣ ಕಸರತ್ತಿನ ಜೊತೆಗೆ ಕಟ್ಟುನಿಟ್ಟು ಪಥ್ಯವನ್ನೂ ಅನುಸರಿಸಿದ್ದಾರೆ. ದೇಹದಾರ್ಢ್ಯದ ಬಗ್ಗೆ ತಮ್ಮ ತಂದೆ ಪ್ರಭಾಕರ್ ಅವರಿಗಿದ್ದ ಆಕರ್ಷಣೆಯನ್ನು ನೆನಪಿಸಿಕೊಳ್ಳುವ ವಿನೋದ್, ಅಪ್ಪನ ಪ್ರೀತಿ–ನೆನಪಿನ ರೂಪದಲ್ಲೂ ತಮ್ಮ ಹುರಿಗಟ್ಟಿದ ದೇಹವನ್ನು ಕಾಣುತ್ತಾರೆ.

ತರುಣನೊಬ್ಬನ ಪ್ರೇಮ–ಪ್ರಸಂಗಗಳ ಕಥೆ ‘ರಗಡ್’ ಚಿತ್ರದ್ದು. ನಿರ್ದೇಶಕ ಮಹೇಶ್ ಗೌಡರು ವಿನೋದ್ ವರ್ಚಸ್ಸಿಗೆ ತಕ್ಕಂತೆ ಕಥೆಯನ್ನು ರೂಪಿಸಿದ್ದಾರಂತೆ. ನಾಯಕನ ದೇಹವನ್ನೇ ಚಿತ್ರದ ಪ್ರಮುಖ ಆಕರ್ಷಣೆಯನ್ನಾಗಿ ಬಿಂಬಿಸುವುದು ಅವರ ಉದ್ದೇಶ. ‘ನೀನ್ ಹೊಡೆದ್ರೆ ಧೂಳ್ ಬರುತ್ತೆ, ನಾನ್ ಹೊಡೆದ್ರೆ ಮೂಳೆ ಮುರಿಯುತ್ತೆ’ ಎಂದು ಚಿತ್ರದ ನಾಯಕ ಟೀಸರ್‌ನಲ್ಲಿ ಹೇಳುವುದೇ ಚಿತ್ರದ ಹೂರಣವನ್ನು ಬಿಂಬಿಸುವಂತಿದೆ.

ಮೂವತ್ತು ಸೆಕೆಂಡ್‌ಗಳ ಕಾಲ ನೀರಿನಲ್ಲಿ ಇರುವ ಸನ್ನಿವೇಶವೊಂದನ್ನು ವಿನೋದ್ ಡ್ಯೂಪ್ ಇಲ್ಲದೆ ನಿರ್ವಹಿಸಿದ್ದಾರೆ. ಸಾಹಸಪ್ರಧಾನ ಕಥನದಲ್ಲೂ ಸಾಕಷ್ಟು ಸೆಂಟಿಮೆಂಟ್ ದೃಶ್ಯಗಳನ್ನು ನಿರ್ದೇಶಕರು ಸಂಯೋಜಿಸಿದ್ದಾರಂತೆ. ‘ರಗಡ್’ ಚಿತ್ರವನ್ನೊಂದು ಮನರಂಜನೆಯ ಪ್ಯಾಕೇಜ್ ರೂಪದಲ್ಲಿ ಪ್ರೇಕ್ಷಕರ ಎದುರು ತರುವ ಪ್ರಯತ್ನ ಅವರದು. ಚೈತ್ರಾ ರೆಡ್ಡಿ ಚಿತ್ರದ ನಾಯಕಿ.



## ರೋಚಕ-ಮೋಹಕ ಚಿಟ್ಟೆ

‘ಚಿಟ್ಟೆ’ ಚಿತ್ರಮಂದಿರಗಳಿಗೆ ಬರಲು ಸಿದ್ಧವಾಗಿದೆ (ಜೂನ್ 29ರಂದು ತೆರೆಗೆ). ಸಿನಿಮಾದ ಬಿಡುಗಡೆ ಸನ್ನಿಹಿತವಾದಂತೆ ಚಿತ್ರದ ನಾಯಕಿ ಹರ್ಷಿಕಾ ಪೂಣಚ್ಚ ಅವರಿಗೂ ರೆಕ್ಕೆ ಬಂದಂತಿದೆ. ‘ಚಿಟ್ಟೆ’ಯ ಪ್ರಚಾರಕ್ಕಾಗಿ ಅವರು ಇನ್ನಿಲ್ಲದ ಮುತುವರ್ಜಿ ವಹಿಸಿದ್ದಾರೆ; ಕಾಲೇಜ್ ಕ್ಯಾಂಪಸ್‌ಗಳಿಗೆ ಭೇಟಿಕೊಡುವ ಮೂಲಕ ತರುಣ ತರುಣಿಯರನ್ನು ಸೆಳೆಯಲು ಪ್ರಯತ್ನಿಸಿದ್ದಾರೆ.

ಎಂ.ಎಲ್. ಪ್ರಸನ್ನ ‘ಚಿಟ್ಟೆ’ಯ ನಿರ್ದೇಶಕರು. ‘ರಂಗಪ್ಪ ಹೋಗ್ಬಿಟ್ನಾ’ ಎನ್ನುವ ಹಾಸ್ಯಚಿತ್ರ ನಿರ್ದೇಶಿಸಿದ್ದ ಅವರೀಗ ಸಸ್ಪೆನ್ಸ್ ಥ್ರಿಲ್ಲರ್ ಮೊರೆಹೋಗಿದ್ದಾರೆ. ರೋಚಕತೆ ಹಾಗೂ ಮೋಹಕತೆ ತಾವು ರೂಪಿಸಿದ ‘ಚಿಟ್ಟೆ’ಯ ಎರಡು ರೆಕ್ಕೆಗಳು ಎನ್ನುವ ನಂಬಿಕೆ ಅವರದು. ಆಗಷ್ಟೇ ಹನಿಮೂನ್ ಮುಗಿಸಿಬಂದ ಯುವಜೋಡಿಯ ಬದುಕಿನಲ್ಲಿ ಸಂಭವಿಸುವ ಘಟನಾವಳಿಗಳ ಕಥೆ ಚಿತ್ರದಲ್ಲಿದೆ.

ಹರ್ಷಿಕಾ ಅವರಿಗೆ ಚಿತ್ರಕಥೆಯಷ್ಟೇ ಶೂಟಿಂಗ್ ಕೂಡ ಖುಷಿ ಕೊಟ್ಟಿದೆ. ಸಿನಿಮಾದ ಬಹುಭಾಗ ಚಿತ್ರೀಕರಣಗೊಂಡಿರುವ ಇರುಳಿನಲ್ಲಿ. ರಾತ್ರಿಯಲ್ಲಿ ಕೆಲಸ ಮಾಡುವ ಅನುಭವ ಹರ್ಷಿಕಾರಿಗೆ ವಿಶಿಷ್ಟವಾಗಿ ಕಂಡಿದೆ. ಪೇಂಟಿಂಗ್‌ಗಳನ್ನು ರಚಿಸುವ ಮೂಲಕ ನಾಯಕ ಪ್ರೇಮ ನಿವೇದನೆ ಮಾಡಿಕೊಳ್ಳುವ ಪರಿಯೂ ಅವರಿಗೆ ಹೊಸದೆನ್ನಿಸಿದೆ. ಯಶಸ್ ಸೂರ್ಯ ಚಿತ್ರದ ನಾಯಕ. ದೀಪಿಕಾ, ಕಾರ್ತೀಕ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಕೆಜೆಟನ್ ಡಯಾಸ್ ಸಂಗೀತ, ವಿಶ್ವಜಿತ್ ರಾವ್ ಛಾಯಾಗ್ರಹಣ ಚಿತ್ರಕ್ಕಿದೆ.